**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ : ಜಂ.ನಿ.(ಆ) ಖಾಯಂ.ಪೂ.ಸೇ.ಘೋ01/2021-22. ದಿನಾಂಕ : 02-11-2022.

ಜ್ಞಾಪನ

ವಿಷಯ : ಇಲಾಖಾ ವ್ಯಾಪ್ತಿಯಲ್ಲಿನ ವಿವಿಧ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರ.ದ.ಸ. ಮತ್ತು ದ್ವಿ.ದ. ಸಹಾಯಕರುಗಳಿಗೆ ತರಬೇತಿ ನೀಡಿ ಕಾರ್ಯಕ್ಷಮತೆ ಪರೀಕ್ಷೆಯನ್ನು ಹಮ್ಮಿಕೊಂಡು ಮೌಲ್ಯಮಾಪನ ಹಮ್ಮಿಕೊಂಡಿರುವ ಬಗ್ಗೆ ಪರಿಶೀಲನಾ ಸಭೆಗೆ ಹಾಜರಾಗುವ ಕುರಿತು.

ಉಲ್ಲೇಖ 1) ಮಾನ್ಯ ಆಯುಕ್ತರ ಸೂಚನೆ ದಿನಾಂಕ : 31-10-2022.

2) ಈ ಕಛೇರಿಯ ಸಮಸಂಖ್ಯೆ ಜ್ಞಾಪನ ಪತ್ರ ದಿನಾಂಕ : 23.09.2022.

-*-*-*-*-*-

ವಿಷಯಕ್ಕೆ ಸಂಬಂಧಿಸಿದಂತೆ ಇಲಾಖಾ ವ್ಯಾಪ್ತಿಯಲ್ಲಿನ ವಿವಿಧ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರ.ದ.ಸ ಹಾಗೂ ದ್ವಿ.ದ.ಸ ನೌಕರರುಗಳ ಕಾರ್ಯಕ್ಷಮತೆ ಹಾಗೂ ವಿಷಯ ಪರಿಣತಿಯ ಬಗ್ಗೆ ಆಯಾ ಕೇಂದ್ರ ಕಛೇರಿಯ ಮುಖ್ಯಸ್ಥರು ಮತ್ತು ಜಿಲ್ಲಾ ಹಂತದಲ್ಲಿನ ಕಛೇರಿಗಳು ಮತ್ತು ಅಧೀನ ಕಛೇರಿಗಳ ಸಿಬ್ಬಂದಿಗಳಿಗೆ ಆಯಾ ಉಪನಿರ್ದೇಶಕರು ತರಬೇತಿ ನಡೆಸಿ, ನೌಕರರುಗಳಿಗೆ ಪರೀಕ್ಷೆಯನ್ನು ಹಮ್ಮಿಕೊಳ್ಳುವಂತೆ ಎಲ್ಲಾ ಅಗತ್ಯ ಮಾರ್ಗಸೂಚನೆಯನ್ನು ಉಲ್ಲೇಖಿತ-01ರ ಪತ್ರದಲ್ಲಿ ತಿಳಿಸಲಾಗಿತ್ತು.

ಈ ಹಿಂದಿನ ಮೌಲ್ಯಮಾಪನ ಪರಿಶೀಲನಾ ಸಭೆಯ ಸಂದರ್ಭದಲ್ಲಿಯೂ ಮಾನ್ಯ ಆಯುಕ್ತರು ಅಗತ್ಯ ನಿರ್ದೇಶನಗಳನ್ನು ನೀಡಿ ಸಿಬ್ಬಂದಿಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ನಿರಂತರ ಮೌಲ್ಯಮಾಪನದ ಅಗತ್ಯತೆಯನ್ನು ಸೂಚಿಸಿರುತ್ತಾರೆ.

ಈ ನಿಟ್ಟಿನಲ್ಲಿ ಕಛೇರಿಗಳ ವತಿಯಿಂದ ಆಯಾ ಬೋಧಕೇತರ ಸಿಬ್ಬಂದಿ ವರ್ಗದವರಿಗೆ ನಡೆಸಿರುವ ಕಾರ್ಯಕ್ಷಮತೆ ಹೆಚ್ಚಿಸುವ ತರಬೇತಿ ಕಾರ್ಯಕ್ರಮದ ಕುರಿತಂತೆ ಮತ್ತು ಮೌಲ್ಯಮಾಪನ ನಡೆಸಿರುವ ಬಗ್ಗೆ ದಿನಾಂಕ ; 05-11-2022 ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ Zoom ಮುಖಾಂತರ ಬೆಳಿಗ್ಗೆ 11.00 ಗಂಟೆಗೆ ಪರಿಶೀಲನಾ ಸಭೆಯನ್ನು ಆಯೋಜಿಸಲಾಗಿದೆ. ಸದರಿ ಸಭೆಯಲ್ಲಿ ಆಯಾ ಕಛೇರಿಯ ವತಿಯಿಂದ ಸಂಬಂಧಪಟ್ಟ ಹಿರಿಯ ಅಧಿಕಾರಿಯವರು ಮತ್ತು ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಆಯಾ ವಿಭಾಗೀಯ ಸಹನಿರ್ದೇಶರುಗಳು, ವ್ಯಾಪ್ತಿಯ ಉಪನಿರ್ದೇಶಕರುಗಳಿಂದ ವಿವರವಾದ ದಾಖಲೆಗಳ ಸಹಿತವಾದ ಮಾಹಿತಿಗಳನ್ನು ಕೆಳಗಿನ ಮಾದರಿಯಲ್ಲಿ ಪಡೆದು ಪರಿಶೀಲಿಸಿ ಸದರಿ ಮಾಹಿತಿಗಳನ್ನು ಸಭೆಯಲ್ಲಿ ಹಾಜರಿದ್ದು ಪ್ರಸ್ತುತಪಡಿಸಲು ಸೂಚಿಸಿದೆ.

ಮುಂಗಡ ಪ್ರತಿಯನ್ನು ಮಾಹಿತಿಗಾಗಿ ದಿನಾಂಕ 03-11-2022 ರೊಳಗಾಗಿ (obcpi2016@gmail.com) ಗೆ ಮಿಂಚಂಚೆ ಮೂಲಕ ಸಲ್ಲಿಸಲು ತಿಳಿಸಿದೆ.

**ನಮೂನೆ :**

**ತರಬೇತಿ ಹೊಂದಿ ಪರೀಕ್ಷೆಗೆ ಹಾಜರಾದ ನೌಕರರ ವಿವರ**

- ತರಬೇತಿ ನಡೆಸಿದ ಸ್ಥಳ :
- ತರಬೇತಿ ಹೊಂದಿದ ಸಿಬ್ಬಂದಿಗಳ ಸಂಖ್ಯೆ :
- ತರಬೇತಿಗೆ ನಿಗದಿಪಡಿಸಿದ್ದ ವಿಷಯಗಳು :
- ತರಬೇತಿ ನೀಡಿದ ಅಧಿಕಾರಿ / ಸಿಬ್ಬಂದಿ ವಿವರ :

| ಕ್ರಸಂ | ನೌಕರರ ಹೆಸರು / ಕಛೇರಿ ವಿಳಾಸ | ತರಬೇತಿ ಪಡೆದ ಅವಧಿ | ಪರೀಕ್ಷೆಯಲ್ಲಿ ಪಡೆದ ಅಂಕಗಳು | ಷರಾ |
|---|---|---|---|---|

ತರಬೇತಿ ಹೊಂದಬೇಕಾದ ನೌಕರರ ವಿವರ :-

| ಕ್ರಸಂ | ನೌಕರರ ಹೆಸರು ವಿಳಾಸ | ತರಬೇತಿ ಹಮ್ಮಿಕೊಳ್ಳುವ ದಿನಾಂಕ | ಷರಾ |
|---|---|---|---|

"ಮಾನ್ಯ ಆಯುಕ್ತರ ಆದೇಶದ ಮೇರೆಗೆ"

ಡಾ.ರೂಪಶ್ರೀ.ಎಸ್,ಕೆ.ಎ.ಎಸ್.
ಜಂಟಿ ನಿರ್ದೇಶಕರು (ಆಡಳಿತ)

ಗೆ,

1. ಅಪರ ಆಯುಕ್ತರು, (ಆಡಳಿತ) ಸಾ.ಶಿ.ಇ, ಧಾರವಾಡ, ಕಲಬುರಗಿ
2. ನಿರ್ದೇಶಕರು / ಜಂಟಿ ನಿರ್ದೇಶಕರು (ಆಡಳಿತ) ಸಮಗ್ರ ಶಿಕ್ಷಣ ಕರ್ನಾಟಕ ,ಬೆಂಗಳೂರು,
3. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳು ಮೇಲ್ಕಂಡಂತೆ ಮಾಹಿತಿಯೊಂದಿಗೆ ಸಭೆಗೆ ಹಾಜರಾಗಲು ಕೋರಿದೆ.
4. ರಾಜ್ಯದ ಎಲ್ಲಾ ವಿಭಾಗೀಯ ಸಹನಿರ್ದೇಶಕರು, ಇವರು ವ್ಯಾಪ್ತಿಯ ಉಪನಿರ್ದೇಶಕರು (ಆಡಳಿತ ) / (ಅಭಿವೃದ್ಧಿ) ರವರಿಗೆ ಸಂಬಂಧಪಟ್ಟ ಮಾಹಿತಿಗಳೊಂದಿಗೆ ಹಾಜರಾಗಲು ತಿಳಿಸಿದೆ.
5. ರಾಜ್ಯದ ಎಲ್ಲಾ ಸಿಟಿಇ ಪ್ರಾಂಶುಪಾಲರುಗಳು ಸದರಿ ಕಛೇರಿಗಳಿಗೆ ಸಂಬಂಧಪಟ್ಟ ಮಾಹಿತಿಗಳೊಂದಿಗೆ ಹಾಜರಾಗಲು ತಿಳಿಸಿದೆ.
6. ಆಯುಕ್ತರ ಘಟಕ ಕಛೇರಿಗಳ ಮುಖ್ಯಸ್ಥರುಗಳು ಸಭೆಯಲ್ಲಿ ಮಾಹಿತಿಯೊಂದಿಗೆ ಹಾಜರಾಗಲು ತಿಳಿಸಿದೆ.
7. ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ (ಆಡಳಿತ ಮತ್ತು ಅಭಿವೃದ್ಧಿ) ಮಾಹಿತಿ ಹಾಗೂ ಕ್ರಮಕ್ಕಾಗಿ
8. ಹಿರಿಯ ಸಹಾಯಕ ನಿರ್ದೇಶಕರು ( ಆಡಳಿತ) ಮತ್ತು ಕಛೇರಿಯ ಎಲ್ಲಾ ಶಾಖಾಧಿಕಾರಿಗಳಿಗೆ
9. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ, ಆಯುಕ್ತರ ಕಛೇರಿ, ಇವರು ಸದರಿ ಸಭೆಗೆ ಝೂಮ್ ಲಿಂಕ್ ಅನ್ನು ವ್ಯವಸ್ಥೆಗೊಳಿಸಲು ಮತ್ತು ಸಭಾ ಕೊಠಡಿಯಲ್ಲಿ ಸಭೆಯನ್ನು ಹಮ್ಮಿಕೊಳ್ಳಲು ಅಗತ್ಯ ತಾಂತ್ರಿಕ ಸಿಬ್ಬಂದಿಯನ್ನು ನಿಯುಕ್ತಿಗೊಳಿಸಿ ಸಮನ್ವಯ ಕೈಗೊಳ್ಳಲು ತಿಳಿಸಿದೆ.
10. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಯವರಿಗೆ ಮಾಹಿತಿ ಮತ್ತು ಕ್ರಮಕ್ಕಾಗಿ
11. ಕಛೇರಿ ಪ್ರತಿ